MARGINAL FARMERS AGRICULTURAL LABOURERS SCHEME

510. SRI B. BHASKAR SHETTY (Kaup).—

Will the Minister for Agriculture and Forests be pleased to state.

(*a*) when the marginal farmers agricultural labourers scheme was started in Udipi and Coondapur taluks;

(*b*) the amount earmarked for the scheme ;

(*c*) the amount paid so far to the farmers and agricultural labourers in each taluk under this scheme ;

(*d*) the period up to which the scheme would be extended ?

SRI K. H. PATIL (Minister for Agriculture and Forets).—

(*a*) The scheme was inaugurated in both the taluks on 12-8-71.

(*b*) The amount required to be spent under scheme during the plan period is as follows.—

Bank and other institutions	...	Rs. 323-50
Small farmers corporation	..	Rs. 124-90
The total amount provided so far by Government to this corporation.	...	Rs. 5 lakhs

(*c*) The details of the amount disbursed is as follows.—

Bank and other institutions	*Udipi Tq.*	*Coondapur Tq.*
Short term agricultural loans	Rs. 1.44 lakhs	Rs. 1.80 lakhs
Dairy development loans	Rs 0.41 lakh	...
Loan for digging wells	Rs. 0 69 lakh	Rs. 0.05 lakh
Loan for pumpsets		
Small farmers corporations		
Customers service centres	Rs. 20,000	Rs. 10,000
Subsidy to pumpsets	Rs. 1,666	Rs. 6,785
Contribution towards share capital	Rs. 800	Rs. 2,120

(*d*) The scheme will terminate on 31-3-1974.

ಶ್ರೀ ಬಿ. ಭಾಸ್ಕರಶೆಟ್ಟಿ .—(೫) ಪ್ರಶ್ನೆಗೆ ಉತ್ತರವಾಗಿ ಕೃಷಿಕರಿಗೆ ಬ್ಯಾಂಕ್ ಸಂಘ ಸಂಸ್ಥೆಗಳಿಂದ ಹಾಗೂ ಚಿಕ್ಕ ರೈತರ ಸಂಸ್ಥೆಯಿಂದ ಸಾಲ ಕೊಡುವ ಯೋಜನೆಯ ವ್ಯವಸ್ಥೆ ಮಾಡಿದ್ದೇವೆಂದು ಹೇಳಿದ್ದೀರಿ ರೈತರಿಗೆ ಸಾಲ ಯಾವ ರೀತಿಯಲ್ಲಿ ಕೊಡಬೇಕೆಂದು ವ್ಯವಸ್ಥೆ ಮಾಡಿದ್ದೀರಿ ?

† ಶ್ರೀ ಕೆ. ಎಚ್. ಪಾಟೀಲ್ .—ಒಕ್ಕಲುತನಕ್ಕೆ ಬೇಕಾದಂಥ ಸಾಧನ ಸಾಮಗ್ರಿಗಳನ್ನು ಖರೀದಿ ಮಾಡುವುದಕ್ಕೆ ಸಕಾಲದಲ್ಲಿ ಸಾಲ ಕೊಡಲಾಗುತ್ತದೆ ಅದೂ ಅಲ್ಲದೆ ಟಿಲ್ಲರ್ಸ್ ರೀಪೇರ್ಸ್, ಪಂಪುಸೆಟ್ಟುಗಳನ್ನು ಕೊಳ್ಳುವುದಕ್ಕೆ ಮತ್ತು ಸ್ಪೈಯಿಂಗ್ ಪರ್ಪಸಸ್‌ಗೆ ಅವುಗಳ ಟ್ರಾನ್ಸ್‌ಪೋರ್ಟ್ ಪರ್ಪಸಸ್ಸಿಗೆ ಸಾಲ ಕೊಡುತ್ತೇವೆ. ಆವರೆ ಪಂಪುಸೆಟ್ಟುಗಳನ್ನು ಹೈರ್‌ಪರ್ಚೇಜ್ ಸಿಸ್ಟಂನಲ್ಲಿ ಕೊಂಡುಕೊಳ್ಳುವುದಕ್ಕೆ ಸಾಲ ಕೊಡಬೇಕೆಂದು ಆಜ್ಞೆಮಾಡಿದೆ.

ಶ್ರೀ ಬಿ. ಬಾಸ್ಕರ ಶೆಟ್ಟಿ .—ರೈತರಿಗೆ ಶೇಕಡ ೩೩ ೧/೩ ಭಾಗದಷ್ಟು ಸಬ್ಸಿಡಿ ಸರ್ಕಾರದವರು ಕೊಡ ಬೇಕೆಂದಿರುವಾಗ, ಅವರಿಗೆ ವಿಶೇಷ ಸವಲತ್ತುಗಳನ್ನು ಕೊಡುವುದರ ಜೊತೆಗೆ ಬ್ಯಾಂಕುಗಳ ಮೂಲಕ ಸಾಲ ಸಿಗುವ ವ್ಯವಸ್ಥೆಯನ್ನೂ ಸಹ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್ .—ಬ್ಯಾಂಕುಗಳ ಮೂಲಕ ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಗೆ ಸಾಲ ಕೊಡುವಾಗ ಅವರಿಗೆ ಸರ್ಕಾರ ಗ್ಯಾರಂಟಿ ಕೊಡುವ ಜವಾಬ್ದಾರಿಯನ್ನು ವಹಿಸುತ್ತದೆ.

ಶ್ರೀ ಯು. ಟಿ. ಫರೀದ್ —ಈ ಮಾರ್ಜಿನಲ್ ಬೆನಿಫಿಟ್ಟನ್ನು ಸೌತ್ ಕೆನರಾ ತಾಲ್ಲೂಕಿಗೆ ಎಕ್ಸ್‌ಟೆಂಡ್ ಮಾಡಿದ್ದೀರಿ. ಅದಮೇಲೆ ಇದನ್ನು ಮುಂದೆ ಇತೀ ಸಂಸ್ಥಾನಕ್ಕೇ ಎಕ್ಸ್‌ಟೆಂಡ್ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಇದು ಸೆಂಟ್ರಲ್ ಗೌರ್ನಮೆಂಟ್ ಸ್ಕೀಂ ಆಗಿರುವುದರಿಂದ ಎರಡು ಜಿಲ್ಲೆಗಳಿಗೆ ಮಾತ್ರ ಪರವಾನೆ ಕೊಟ್ಟಿದೆ.

ಶ್ರೀ ಬಿ. ವಿ. ಕಕ್ಕಿಲಾಯ .—ಮಂಗಳೂರಿನಲ್ಲಿ ಎಲ್ಲಾ ಎಂ. ಎಲ್. ಎ. ಗಳು ಮಾನ್ಯ ಕೃಷಿಮಂತ್ರಿಗಳ ಸಚಿವರಿಗೆ ಈ ಯೋಜನೆಯನ್ನು ಎಲ್ಲಾ ಕಡೆಗೂ ವಿಸ್ತಾರ ಮಾಡಬೇಕೆಂದು ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ ಎಚ್. ಪಾಟೀಲ್ .—ಅದು ಸರ್ಕಾರದ ಗಮನಕ್ಕೆ ಬಂದ ಹಾಗೆ ನನಗೆ ಕಾಣುತ್ತದೆ. ನಾನು ಹೇಳಿದ ಹಾಗೆ ಈಗಾಗಲೇ ಕೇಂದ್ರ ಸರ್ಕಾರದವರು ನಿರ್ದಿಷ್ಟವಾದ ಒಂದು ನಿಲುವನ್ನು ಈ ಬಗ್ಗೆ ತಳೆದು ಎರಡು ತಾಲ್ಲೂಕುಗಳಿಗೆ ಮಾತ್ರ ಈ ಯೋಜನೆಯನ್ನು ಪ್ರಾಯೋಗಿಕವಾಗಿ ಜಾರಿಗೆ ತಂದಿದ್ದಾರೆ. ಆದ್ದರಿಂದ ಹೆಚ್ಚು ವಿಸ್ತರಣೆ ಮಾಡುವುದಕ್ಕೆ ಸಧ್ಯಕ್ಕೆ ಅವಕಾಶವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ .—ಉಡುಪಿ ಮತ್ತು ಕುಂದಾಪುರ ತಾಲ್ಲೂಕುಗಳಿಗೆ ವಿಶೇಷವಾದಂಥ ಕಾರಣಗಳಿವೆಯೆಂದು ಹೇಳಿದಿರಿ. ಆ ರೀತಿಯಾಗಿ ಬೇರೆ ಕಡೆಗಳಲ್ಲಿ ಇದ್ದರೆ ಆಗ ಈ ಯೋಜನೆಯನ್ನು ಅಲ್ಲಿಗೂ ವಿಸ್ತರಿಸುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್ .—ಮೊದಲು ಅದನ್ನು ವಿಸ್ತರಣೆ ಮಾಡುವಾಗ ಯಾವ ರೀತಿ ರೂಪ ರೇಖೆಗಳು ಅಳವಡಿಸಿದ್ದರೋ ಗೊತ್ತಿಲ್ಲ. ಅದರ ಬಗ್ಗೆ ಈಗಾಗಲೇ ಕೇಂದ್ರ ಸರ್ಕಾರದಿಂದ ಒಪ್ಪಿಗೆ ಪಡೆದು ಒಂದು ನಿಲುಮೆಗೆ ಬಂದಿರುವುದರಿಂದ ಈಗ ಅದನ್ನು ಬದಲಾವಣೆ ಮಾಡುವುದು ಸಮರ್ಪಕವಲ್ಲ.

ಶ್ರೀ ಬಿ ಭಾಸ್ಕರಶೆಟ್ಟಿ .—ಸಹಕಾರ ಸಂಘಗಳ ಮೂಲಕ ರೈತರಿಗೆ ಸಾಲ ಒದಗಿಸುತ್ತೇವೆಂದು ಹೇಳಿದಿರಿ. ಸಹಕಾರ ಸಂಘಗಳು ಡಿಫಾಲ್ಟರ್ಸ್ ಆದರೆ ರೈತರಿಗೆ ಸಾಲ ಸಿಗುವುದಿಲ್ಲ. ಅದಕ್ಕಾಗಿ ತಾವು ಈ ಸಾಲವನ್ನು ಕೊಡುವಾಗ ವಿಶೇಷ ರೀತಿಯ ಯೋಜನೆಯೊಂದನ್ನು ಮಾಡಿ ರೈತರಿಗೆ ಕೂಡಲೇ ಸಾಲ ಸಿಗುವ ಹಾಗೆ ವ್ಯವಸ್ಥೆಯೇನಾದರೂ ಮಾಡಿದ್ದೀರಾ ?

ಶ್ರೀ ಕೆ ಎಚ್. ಪಾಟೀಲ್ :—ಮಾನ್ಯ ಸದಸ್ಯರ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಅವಶ್ಯಕವಾದ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

SHIVAJAMA LANDS IN KOLLEGAL TALUK

518. SRI R. RACHE GOWDA (Hanur) :—Will the Minister for Revenue be pleased to state :—

(*a*) the number of Shivajama land (in acres) in Kollegal Taluk,

(*b*) the number of persons who are in possession and enjoyment of such land,

(*c*) the number of persons who have been granted pattas,

(*d*) whether the Government is thinking of granting pattas a rly to those who have not been granted pattas ?